

# ನೀನೇ ಗೊಂಬೆ ನಿನಗ್ಯಾಕೋ ಗೊಂಬೆ

■ **ಶೇಖರಯ್ಯ ಟಿ.ಎಚ್.ಎಂ.**

ಕಲೆ: ಸಂತೋಷ್ ಸಸಿಹಿತ್ಲು

ತಮ್ಮೂರಲ್ಲಿ ನಡೆದಿದ್ದ ಜಾತ್ರೆಗೆ ಬಸವೇಶನು ಸಹ ಗೆಳೆಯರ ಜೊತೆಗೆ ಹೋಗಿದ್ದ. ಮನೆಯಿಂದ ಜಾತ್ರೆಗುಂಟ ಹಾಕಿದ್ದ ಅಂಗಡಿಗಳಲ್ಲಿನ ಆಟದ ಸಾಮಗ್ರಿಗಳನ್ನು, ಗೊಂಬೆಗಳನ್ನು ನೋಡ್ತಾ... 'ಏ ಅಲ್ಲಿ ನೋಡೋ ಆ ಗೊಂಬೆ ಎಷ್ಟು ಚೆನ್ನಾಗಿದೆ... ಇಲ್ಲಿ ನೋಡೋ ಈ ಆಟದ ಸಾಮಗ್ರಿ ಎಷ್ಟು ಚೆನ್ನಾಗಿ ಐತೆ' ಅಂತ ತಮ್ಮಲ್ಲಿ ಮಾತನಾಡುತ್ತಿದ್ದರು. ಹೀಗೆ ಸಾಗುತ್ತಿರುವಾಗ ದಾರಿಯ ಕೊನೆಯ ಗೊಂಬೆ ಅಂಗಡಿಯೊಂದರಲ್ಲಿ ಮುದ್ದಾದ ಗೊಂಬೆಯೊಂದು ಬಸವೇಶನ ಕಣ್ಣಿಗೆ ಬಿತ್ತು. ಹೆಂಗಾದ್ರೂ ಮಾಡಿ ಅಮ್ಮನ ಹತ್ತಿರ ಅದನ್ನು ಕೊಡಿಸಿಕೊಳ್ಳಬೇಕೆಂಬ ಆಸೆ ಮೂಡಿತು. ಗೆಳೆಯರನ್ನೆಲ್ಲ ಅಲ್ಲೇ ಬಿಟ್ಟು ಓಡೋಡಿ ಮನೆಗೆ ಬಂದವನೇ 'ಅಮ್ಮ, ಅಮ್ಮ... ನಾನೊಂದು ಗೊಂಬೆ ನೋಡಿನೀ. ಅದುನ್ನ ನನಗೆ ಕೊಡಿಸಮ್ಮ' ಅಂತ ಒಂದೇ ಸಮನೆ ಹಟ ಹಿಡಿದ. ಮಗನ ಆಸೆಯನ್ನು ಪೂರೈಸುವ ಪರಿಸ್ಥಿತಿ ಶಾಂತಕ್ಕನಿಗೆ ಇರಲಿಲ್ಲ. ಕಾರಣ ಆ ವರ್ಷ ತುಂಬಾ ಮಳೆಯಾಗಿದ್ದರಿಂದ ಅವರ ಶೇಂಗಾ ಹೊಲವು ನೀರು ತುಂಬಿ ಶೇಂಗಾವೆಲ್ಲ ಜೊಳ್ಳಾಗಿ ಹಾಕಿದ್ ಬಂಡವಾಳನು ಬಂದಿರಲಿಲ್ಲ. ಜೀವನ ನಡೆಸೋದೇ ಕಷ್ಟವಾಗಿತ್ತು. ಇನ್ನು ಜಾತ್ರೆ, ಗೊಂಬೆ, ಆಟದ ಸಾಮಗ್ರಿ ಕೊಡಿಸೋ ಮಾತು ಎಲ್ಲಿಂದ ಬಂತು. ಆದರೆ ಈ ವಿಚಾರ ಪುಟ್ಟಕಂದ ಬಸವೇಶನಿಗೆ ಹೇಗೆ ಗೊತ್ತಾಗಬೇಕು? ಅವನದು ಒಂದೇ ಹಟ'. ಅಮ್ಮ ಜಲ್ದಿ ಬಾರಮ್ಮ... ಗೊಂಬೆ ಖಾಲಿಯಾಗಿ ಬಿಡ್ತವೆ... ಬೇಗ ತಗಂಬರನ' ಅನ್ನದು... 'ಹೇ ಬಸವೇಶ ಇವತ್ತು ಬ್ಯಾಡೋ ನಾಳೆ ಕೊಡುಸ್ತೀನಿ. ನಾಳೆ ಆದ್ರೆ ಸ್ವಲ್ಪ ಕಮ್ಮಿ ರೇಟಿಗೆ ಸಿಗ್ತವೆ' ಅಂತ ಅವರಮ್ಮ ಏನೇನೋ ಸಬೂಬು ಹೇಳಲು ಯತ್ನಿಸಿದರೂ, ಕೇಳುವ ಸ್ಥಿತಿಯಲ್ಲಿ ಅವನಿರಲಿಲ್ಲ. ಮಗನ ಹಟಕ್ಕೆ ಸೋತ ಶಾಂತಕ್ಕ, ಅವರಿವರ ಶೇಂಗಾ ಬಿಡಿಸಿ ಕೂಡಿಟ್ಟಿದ್ದ ನೂರು ರೂಪಾಯಿ ತೆಗೆದುಕೊಂಡು ಗೊಂಬೆ ಕೊಡಿಸಲು 'ಗೊಂಬೆ ಅಂಗಡಿ ಎಲ್ಲಿದೆ ತೋರಿಸು ಬಾರೋ?' ಅಂತ ಹೇಳಿ ಮಗನ ಜೊತೆ ಹೊರಟರು.

'ಗೊಂಬೆ ಅಣ್ಣಾ... ಗೊಂಬೆ ಅಕ್ಕಾ... ಗೊಂಬೆ... ಬರೇ ಮುನ್ನೂರು ರೂಪಾಯಿ. ಬನ್ನಿ ಬನ್ನಿ ಅಣ್ಣ... ಬನ್ನಿ ಬನ್ನಿ ಅಕ್ಕ... ಇನ್ನು ಮೂರೇ ಮೂರು ಉಳ್ದವೆ...' ಅಂತ ಕೂಗುತ್ತಿದ್ದ ಧ್ವನಿ ಶಾಂತಕ್ಕನ ಎದೆ ದಸಕ್ ಎನ್ನುವಂತೆ ಮಾಡಿತು. 'ಅಯ್ಯೋ ನನ್ನ ಹತ್ರ ಇರದೇ ನೂರು ರೂಪಾಯಿ. ಆತ ನೋಡಿದ್ರೆ ಒಂದು ಗೊಂಬೆ ಮುನ್ನೂರು ರೂಪಾಯಿ ಅಂತಾನೆ. ಈಗ ಬಸವೇಶನಿಗೆ ಹೇಗಪ್ಪಾ ಹೇಳೋದು' ಅಂತ ಅವರಿಗೆ ಚಿಂತೆ ಹತ್ತಿತು. 'ಅಮ್ಮ ಅಲ್ಲಿ ನೋಡ. ಆ ಹಸಿರು ಬಣ್ಣದ್ದು... ಅದು ಬೇಕು... ಅಂತ ಕೇಳಿದ ಬಸವೇಶ. ತಾಯಿಗೋ ಧರ್ಮ ಸಂಕಟ. ಎಷ್ಟು ಹೊತ್ತು ಅಂತ ಸತ್ಯವನ್ನು ಮುಚ್ಚಿಡಲು ಸಾಧ್ಯ... ಮಗನನ್ನು ಪಕ್ಕಕ್ಕೆ ಕರೆದು... 'ಹೇ ಬಸವೇಶ ನನ್ನ ಹತ್ತಿರ ಬರೀ ನೂರು ರೂಪಾಯಿ ಐತೆ. ಗೊಂಬೆ ನೋಡಿದ್ರೆ ಮುನ್ನೂರು ರೂಪಾಯಿ ಅಂತೆ... ಇನ್ನೂ 200 ರೂಪಾಯಿ ದೇವರಾಣೆಗೂ ನನ್ನತ್ರ ಇಲ್ಲ ಕಣೋ. ಇದೊಂದು ಸರಿ ಕ್ಷಮಿಸಪ್ಪ. ಖಂಡಿತಾ ಮುಂದಿನ ವರ್ಷ ನಿನಗೆ ಕೊಡುಸ್ತೀನಿ. ಮುದ್ದು ಬಂಗಾರು ಅಲ್ಲಾ?' ಅಂತ ಮಗನನ್ನು ಸಮಾಧಾನ ಮಾಡಲು ಪ್ರಯತ್ನಿಸಿದರು. ಹಾಗೆ ಹೇಳುತ್ತಿರುವಾಗ ಅಮ್ಮನ ಮುಖದಲ್ಲಿ ಕಂಡ ಆ ಸಂಕಟ ಬಸವೇಶನ ಹೃದಯಕ್ಕೆ ನಾಟಿತು.

'ಹೋಗ್ಲಿ ಬಿಡಮ್ಮ ನೀನು ಇಷ್ಟೊಂದು ಹೇಳ್ತಾ ಇದ್ದೀಯ ಅಂದ್ರೆ ಮುಂದಿನ ವರ್ಷಾನೆ ತಗಂಡ್ರಾತು... ಮತ್ತೆ ಮುಂದಿನ ವರ್ಷನೂ ಆಗಲ್ಲ ಅಂತ ಅನ್ನಬಾರ್ದು' ಅಂದ. 'ಜಾಣ ಬಸವೇಶ' ಅಂತ ಅವರಮ್ಮ ಅವನ ಕೈ ಹಿಡಿದು ಮನೆಯತ್ತ ಸಾಗುತ್ತಿರುವಾಗ, 'ಅಲ್ಲೋ ಬಸವೇಶ ನೀನೇ ನನಿಗೆ ಗೊಂಬೆ ಇದ್ದಂಗದಿ. ನಿನಗೆ ಯಾಕೋ ಗೊಂಬೆ ಬೇಕು...? ನನಗೆ ನೀನು ಗೊಂಬೆ. ನಿನಗೆ ನಾನು ಗೊಂಬೆ. ನಾವಿಬ್ಬರೂ ಸೇರಿ ಆಡುವಾಗ ಕೊಡೋ ಖುಷಿನ ಆ ಬಟ್ಟೆ ಗೊಂಬೆ ಕೊಡ್ತಾತ' ಅವರಮ್ಮ ಅಂದಾಗ, ಬಸವೇಶನ ಕಣ್ಣಲ್ಲಿ ನೀರು ಜಿನುಗಿತು. 'ಹೌದಲ್ಲಮ್ಮ ಅದು ನನಿಗೆ ಹೊಳಿಲೇ ಇಲ್ಲ. ನಿನ್ನಂತ ಮುದ್ದಾದ ಅಮ್ಮನಂಥ ಗೊಂಬೆ ಕಣ್ಮುಂದೆ ಇರುವಾಗ, ನನಗೆ ಆ ಬಟ್ಟೆ ಗೊಂಬೆ ಬೇಡವೇ ಬೇಡಮ್ಮ' ಅಂದ. ಮಗನ ಮುಗ್ಧ ಮಾತುಗಳನ್ನು ಕೇಳಿ, ತಾಯಿಯ ಹೃದಯ ತುಂಬಿ ಬಂತು. ■